Anusandhanvallari
Vol 2022, No.1
March 2022
ISSN 2229-3388

# ಸರ್ವಜ್ಞ ಮತ್ತು ಜಾತಿ ವ್ಯವಸ್ಥೆ

**ಡಾ.ರಾಜಕುಮಾರ**
**ಕನ್ನಡ ಸಹ ಪ್ರಾಧ್ಯಾಪಕಸರಕಾರಿ ಪ್ರಥಮ ದರ್ಜೆ ಕಾಲೇಜು, ಬೀದರ, ಕರ್ನಾಟಕ, ಭಾರತÀ**
Email Id: rajallure@gmail.com

## ಪೀಠಿಕೆ

ಮನುಷ್ಯ ತನ್ನ ಸ್ವಾರ್ಥ ಬದುಕಿಗಾಗಿ ಎನೆಲ್ಲಾ ನಿರ್ಮಿಸಿಕೊಂಡಂತೆ ಜಾತಿಯು ನಿರ್ಮಿಸಿಕೊಂಡಿದ್ದಾನೆ. ಜಾತಿ ಎಂಬ ವಿಷ ಬೀಜ ಬಿತ್ತಿ ಮನಸ್ಸುಗಳು ಒಡೆದು; ಈ ಜಾತಿ ಎಂಬ ಪೆಡಂಭೂತ ಇಂದಿಗೂ ಬೇತಾಳನಂತೆ ಯಾರನ್ನೂ ಬಿಡದೇ ಬೆನ್ನು ಹತ್ತಿದೆ. ಈ ಜಾತಿಯನ್ನು ಹೋಗಲಾಡಿಸಿ, ಮಾನವರ ಮನಸ್ಸು ಒಗ್ಗೂಡಿಸಲಿಕ್ಕೆ ಅನೇಕ ದಾರ್ಶನಿಕರು ಕವಿಗಳು ಶರಣರು ಸಂತರು ಶ್ರಮಿಸಿದ್ದಾರೆ; ಶ್ರಮಿಸುತ್ತಿದ್ದಾರೆ. 'ಜಾತಿ' ಎಂಬುವುದು ಇಂದು ಸಮಾಜದಲ್ಲಿ ಬಹು ಆಳಕ್ಕೆ ಇಳಿದ ಮಹಾ ಅಂಟು ರೋಗವಾಗಿದೆ.

ಮನುಷ್ಯ ತನ್ನ ಬದುಕು ಕಟ್ಟಿಕೊಳ್ಳಲಿಕ್ಕೆ ಯಾವುದೊ ಒಂದು ಕಾಯಕ ಕೈಕೊಳ್ಳುತ್ತಾನೆ.ಅದು ಆತನಿಗೆ ಅನಿವಾರ್ಯವೂ ಹೌದು.ಆತನು ಕೈಕೊಂಡ ಕೆಲಸ ನಾಲ್ಕು ಜನರಿಗೆ ಸಹಾಯವೂ ಆಗುತ್ತದೆ.ಆದರೆ ಅದನ್ನೆ ಮುಂದು ಮಾಡಿಕೊಂಡು ಆತನನ್ನು ಇನ್ನೊಬ್ಬರಿಂದ ಪ್ರತ್ಯೇಕಿಸುವ ಧೋರಣೆ ಮಾತ್ರ ವಿಚಿತ್ರವಾಗಿದೆ. ಆತನಿಂದ ತಯ್ಯಾರಿಸ್ಪಡುವ ವಸ್ತುಗಳು ಎಲ್ಲರಿಗೂ ಬೇಕು ಆದರೆ ಆತ ಮಾತ್ರ ಬೇಡ. ಇದೇ ಆತನ ಒಡೆದಾಳುವ ನೀತಿಯ ಮೂಲ ರಹಸ್ಯ. ಅದಕ್ಕಾಗಿಯೇ ಕನ್ನಡದ ಆದಿಕವಿ ಪಂಪ "ಮನುಷ್ಯ ಜಾತಿ ತಾನೊಂದೆ ವಲಂ " ಎಂದು ಹತ್ತನೇ ಶತಮಾನದಲ್ಲಿಯೇ ಬೋಧಿಸುತ್ತಾನೆ ನಾವು ಮಾಡುವ ಯಾವುದೇ ಕೆಲಸ ಕೀಳಲ್ಲ ಶ್ರೇಷ್ಠವೂ ಅಲ್ಲ ಅವನು ಮಾಡುವ ವೃತ್ತಿಯಿಂದ ಜಾತಿ ವಿಭಾಗಿಸಲಾಗದು ಇಲ್ಲಿ ಎಲ್ಲ ವೃತ್ತಿಗಳು ಸಮಾನವೇ ಆಗಿವೆ. ಹಾಗಾಗಿ ಪಂಪನು ಒಬ್ಬ ವ್ಯಕ್ತಿ ಬೇರೆ ಬೇರೆ ವೃತ್ತಿಗಳನ್ನು ಕೈಗೊಂಡರೂ 'ಮನುಷ್ಯ ಕುಲ ಒಂದೇ' ಎಂದು ಸಾರುತ್ತಾನೆ

## ಮಾನವೀಯ ಮೌಲ್ಯಗಳು

ಮುಂದೆ 12ನೇ ಶತಮಾನದಲ್ಲಿ ಬಸವಾದಿ ಶರಣರು ಜಾತಿ ವರ್ಗಭೇದ,ಲಿಂಗ ತಾರತಮ್ಯ ಮೇಲು-ಕೀಳು ಎಂಬ ಈ ಅಸಮಾನತೆಯನ್ನು ಸಮಾಜದಿಂದ ಬೇರು ಸಮೇತ ಕಿತ್ತೆಸೆಯಲು ಒಂದು ಸಾಮಾಜಿಕ ಮಹಾ ಕ್ರಾಂತಿಯನ್ನೆ ಮಾಡಿದರು. ಅದು ಮಾನವೀಯ ಮೌಲ್ಯಗಳನ್ನು ಪುನಃ ಸ್ಥಾಪಿಸಲು ಹಾಗೂ ಈ ಸಮಾಜಕ್ಕೆ ತಗುಲಿದ ಜಾಡ್ಯವನ್ನು ಹೋಗಲಾಡಿಸಿ ಸಮ ಸಮಾಜವನ್ನು ನಿರ್ಮಿಸಲು ಬಸವಾದಿ ಶರಣರು ಶ್ರಮಿಸಿದರು. ಬಸವಣ್ಣನವರು ತಮ್ಮ ವಚನದಲ್ಲಿ ಜಾತಿಭೇದ ಅಳಿಸಲು ಹೀಗೆ ಹೇಳುತ್ತಾರೆ

"ನೆಲನೊಂದೇ ಹೊಲೆಗೇರಿ ಶಿವಾಲಯಕ್ಕೆ
ಜಲವೊಂದೇ ಶೌಚಾಚಮನಕ್ಕೆ
ಕುಲವೊಂದೇ ತನ್ನ ತಾನರಿದವಂ"
ಮುಂದುವರೆದು ಕನಕದಾಸರು ಕುಲದ ಬಗ್ಗೆ ಹೀಗೆ ವ್ಯಾಖ್ಯಾನಿಸಿದ್ದಾರೆ .
"ಕುಲಕುಲವೆಂದು ಹೊಡೆದಾಡದಿರಿ

ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ"

ಹೀಗೆ ಕುಲದ ಬಗ್ಗೆ ಮಾತನಾಡುವವರಿಗೆ ನೀವು ನಿಮ್ಮ ಕುಲದ ಮೂಲವೇನಾದರು ಬಲ್ಲಿರಾ ಎಂದು ಪ್ರಶ್ನೆ ಮಾಡುವುದರೊಂದಿಗೆ ಮನುಷ್ಯನಿಗೆ ಕುಲ ಮುಖ್ಯವಲ್ಲ ಗುಣ ಮುಖ್ಯ ಎನ್ನುತ್ತಾರೆ.

ಸಂಚಾರಿ ಜ್ಞಾನಕೋಶದಂತಿದ್ದ ಸರ್ವಜ್ಞನು ಈ ನಾಡು ಕಂಡ ವಿಶಿಷ್ಟ ಕವಿ. ಈತನು ದೇಶ ಸುತ್ತಾಡಿ ಅಪಾರವಾದ ಜ್ಞಾನ ಸಂಪಾದಿಸಿದವನು. ಅದನ್ನು ಜನಸಾಮಾನ್ಯರಿಗೆ ತಿಳಿಸುವುದಕ್ಕಾಗಿ ಸರಳ ಶೈಲಿಯ ಜನಪದರ ಹಾಡು ತ್ರಿಪದಿಯಲ್ಲಿಯೇ ತನ್ನ ವಿಚಾರಗಳನ್ನು ಬಿತ್ತರಿಸಿದ. ಜನಪದ ಮತ್ತು ಶಿಷ್ಟ ಈ ಎರಡು ಮಾಧ್ಯಮವನ್ನು ಮೈಗೂಡಿಸಿಕೊಂಡು ಈ ಲೋಕಕ್ಕೆ ಜ್ಞಾನಾಮೃತವನ್ನು ಎರಕ ಹೊಯ್ದನು. ಈತನ ವಿಚಾರ ಧಾರೆಗಳು ಪ್ರಸ್ತುತ ಬದುಕಿಗೂ ತುಂಬಾ ಪ್ರಸ್ತುತವಾಗಿವೆ. ಸರ್ವಜ್ಞನು ಸರ್ವರಲ್ಲಿ ಒಂದೊಂದು ನುಡಿಗಲಿತು ವಿದ್ಯದ ಪರ್ವತವೇ ಆಗಿದ್ದನು. ತನ್ನ ಲೋಕಾನುಭವದಿಂದ ತನ್ನ ಕಾಲದ ಸಾಮಾಜಿಕ ಚಿತ್ರಣವನ್ನು ಎಳೆ ಎಳೆಯಾಗಿ ಚಿತ್ರಿಸಿದ್ದನ್ನು ಕಾಣಬಹುದು. ರಾಜಕೀಯ, ಮೂಢನಂಬಿಕೆ, ದಾನ-ಧರ್ಮ ಜಾತಿ , ಅಧ್ಯಾತ್ಮ, ಗುರು- ಶಿಷ್ಯ ವಿದ್ಯೆಯ ಮಹಿಮೆ, ದೇವರು-ಭಕ್ತ ತಂದೆ-ತಾಯಿ, ಅನ್ನದ ಮಹಿಮೆ, ಮಹಿಳೆ, ಆರೋಗ್ಯ, ವೈದ್ಯ ಪದ್ಧತಿ, ಸತ್ಯದ ಪ್ರತಿಪಾದನೆ ಮತ್ತು ಮೂರ್ಖರ ಬಗ್ಗೆ ಇತ್ಯಾದಿ ವಿಷಯಗಳನ್ನು ಪ್ರತಿಪಾದಿಸಿದ್ದಾನೆ. 'ಆಡು ಮುಟ್ಟದ ಸೊಪ್ಪಿಲ್ಲ ಸರ್ವಜ್ಞನ ಚಿತ್ರಿಸದ ವಿಷಯಗಳಿಲ್ಲ' ಎನ್ನುವಷ್ಟರ ಮಟ್ಟಿಗೆ ನೇರ ಮತ್ತು ದಿಟ್ಟವಾಗಿ ಈ ಸಮಾಜದ ಅಂಕು-ಡೊಂಕುಗಳನ್ನು ತಿದ್ದಿ ತೀಡಲು ಪ್ರಯತ್ನಿಸಿದ್ದ ಕವಿಗಳಲ್ಲಿ ಅಗ್ರಗಣ್ಯ. ತನ್ನ ಚಾಟಿ ಏಟಿನ ನುಡಿಗಳಿಂದ ಸಮಾಜದಲ್ಲಿರುವ ಅನೇಕ ಜಾಡ್ಯವನ್ನು ಕಿತ್ತೆಸೆಯಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದನ್ನು ಈತನ ವಚನಗಳಲ್ಲಿ ನೋಡಬಹುದಾಗಿದೆ. ತಾನು ಕಂಡ ಸಮಾಜದಲ್ಲಿನ ಯಾವ ವಿಷಯವೂ ಬಿಡದೆ ಅವುಗಳನ್ನು ವೈಚಾರಿಕ ನೆಲೆಯಲ್ಲಿ ಚಿಂತಿಸಿ ಸಮಾಜಕ್ಕೆ ಧಾರೆಯೆರೆದಿದ್ದಾನೆ. ನಮ್ಮ ನಾಡಿನ ಸಾಂಸ್ಕೃತಿಕ ರಾಯಭಾರಿಯಾಗಿ, ಲೋಕದ ನಾಯಕನಾಗಿ ತಮಿಳಿನ ತಿರುವಳ್ಳುವರ್,ತೆಲುಗಿನ ವೇಮನರ ಸಾಲಿನಲ್ಲಿ ತನ್ನನ್ನು ಗುರುತಿಸಿಕೊಂಡ ವಿಶಿಷ್ಟ ಕವಿಯಾಗಿದ್ದನು. ಯಾರ ಹಂಗಿನಲ್ಲಿರದೇ ಸ್ವತಂತ್ರವಾಗಿ ತನ್ನ ವಿಚಾರಗಳನ್ನು ನಿರ್ಭಿಡೆಯಾಗಿ ತನ್ನ ಕಾವ್ಯದಲ್ಲಿ ಅಭಿವ್ಯಕ್ತಿಗೊಳಿಸಿದ್ದಾನೆ. ಸರ್ವಜ್ಞನು ಸಮಾಜವನ್ನು ತುಂಬಾ ಸೂಕ್ಷ್ಮವಾಗಿ ಗ್ರಹಿಸಿದ್ದಾನೆ. ಹೀಗಾಗಿಯೇ ಸಾಮಾಜಿಕ ವಿಡಂಬನೆ ತುಂಬಾ ಹರಿತವಾಗಿ ಆತನ ವಚನಗಳಲ್ಲಿ ಮೂಡಿ ಬಂದಿದೆ ಎಂದು ಹೇಳಬಹುದು. ಸಮಾಜದಲ್ಲಿ ಮನುಷ್ಯರನ್ನು ಯಾವುದೇ ಜಾತಿ, ಧರ್ಮ, ಲಿಂಗ ಭೇದ ಮಾಡಿ ನೋಡದೆ ಆತನ ಗುಣ ಪ್ರತಿಭೆಗಳಿಗೆ ಮನ್ನಣೆ ನೀಡಿ ಗೌರವಿಸಬೇಕು ಎನ್ನುತ್ತಾನೆ ಸರ್ವಜ್ಞ. ಕಾರಣ ಮನುಷ್ಯ ಹುಟ್ಟಿನಿಂದ ಶ್ರೇಷ್ಠ ವ್ಯಕ್ತಿಯಾಗುವುದಿಲ್ಲ. ಆತನು ಮಾಡಿದ ಕೆಲಸ ಕಾರ್ಯಗಳಿಂದ ಈ ಸಮಾಜದ ಗೌರವಕ್ಕೆ ಭಾಜನನಾಗುತ್ತಾನೆ. ಜಾತಿ ವರ್ಣ ಭೇದಗಳು ಇವು ಸಮಾಜಕ್ಕೆ ಅಂಟಿದ ಮಹಾರೋಗಗಳು ಅವುಗಳನ್ನು ಹೋಗಲಾಡಿಸಬೇಕು ಎಂಬ ಮಹಾದಾಸೆಯಿಂದ ವಚನಗಳಲ್ಲಿ ಮನೋಜ್ಞವಾಗಿ ಚಿತ್ರಿಸಿದ್ದಾನೆ.

"ಯಾತರದ ಹೂವೇನು ನಾತರದು ಸಾಲದೇ
ಜಾತಿ ವಿಜಾತಿಯೆನಬೇಡ ದೇವನೊಲಿ
ದಾತನೇ ಜಾತಿ ಸರ್ವಜ್ಞ" (ಡಾ.ಎಲ್.ಬಸವರಾಜು(ಸಂ)ಸರ್ವಜ್ಞನ ವಚನಗಳು ಪು.೨೬)

ಹೀಗೆ ಮುಂದುವರೆದು ಒಂದು ಸುಂದರವಾದ ಸಾದೃಶ್ಯದ ಮೂಲಕ ಜಾತಿಯ ಸ್ವರೂಪ ಹೀಗೆ ಚಿತ್ರಿಸುತ್ತಾನೆ, ಹೂ ಯಾವುದಾದರೇನು? ಅದರಿಂದ ಸೂಸುವ ಸುಗಂಧ ಪರಿಮಳ ಮುಖ್ಯವೇ ಹೊರತು ಹೂ ಮುಖ್ಯವಲ್ಲ. ಹೀಗಾಗಿ ನಾವೆಲ್ಲರೂ ಆ ದೇವರ ಮಕ್ಕಳೆ ಆಗಿರುವುದರಿಂದ ಶ್ರೇಷ್ಠ-ಕನಿಷ್ಠ ಎಂಬ ಭೇದ ಭಾವ ಸಲ್ಲದು ಅದರಲ್ಲಿ ಭೇದವೇ ಕಲ್ಪಿಸಲಾಗದು, ದೇವನೊಲಿದಾತನೆ ನಿಜವಾದ ಕುಲಜನು ಎನ್ನುತ್ತಾನೆ,ಮುಂದುವರಿದು ಆತನು ಜನಿಸಿದ ಜಾತಿಗಿಂತಲೂ ಆತನಲ್ಲಿರುವ ಜ್ಞಾನವೇ ಶ್ರೇಷ್ಠ ಎಂಬುವುದಕ್ಕೆ ಹೀಗೆ ಹೇಳುತ್ತಾನೆ.

"'ಜಾತಿ ಹೀನನ ಮನೆಯ ಜ್ಯೋತಿ ತಾ ಹೀನವೇ
ಜಾತಿ ವಿಜಾತಿ ಎನಬೇಡ ದೇವನೊಲಿದಾತನೇ ಜಾತ ಸರ್ವಜ್ಞ" (ಅದೇ;ಪು.೧೨೮)

ಜಾತಿ ಹೀನನ ಮನೆಯಲ್ಲಿರುವ ಜ್ಯೋತಿ ಹೀನವೇ ಅಲ್ಲ. ಜ್ಞಾನಕ್ಕೆ ಜಾತಿ ಸಂಬಂಧವಿಲ್ಲ.ಹೀಗೆ ಜ್ಯೋತಿ ಎಲ್ಲಿದ್ದರೂ ತನ್ನ ಬೆಳಕನ್ನು ನೀಡುವುದರ ಮೂಲಕ ಜಗತ್ತನ್ನು ಹೇಗೆ ಬೆಳಗುತ್ತದೆಯೋ ಹಾಗೆ ಜ್ಞಾನವುಳ್ಳ ವ್ಯಕ್ತಿ ಎಲ್ಲಿ ಜನಿಸಿದರೂ ಆತನ ಜ್ಞಾನಕ್ಕೆ ಯಾವುದೇ ಜಾತಿ ಲೇಪನ ಇರುವುದಿಲ್ಲ. ಆತನ ಜ್ಞಾನ ಈ ಜಗತ್ತನ್ನೇ ಬೆಳಗುತ್ತದೆ ಇಲ್ಲಿ ಜ್ಞಾನಕ್ಕೆ ಬೆಲೆ ಇದೆಯೇ ಹೊರತುಜಾತಿಗಲ್ಲಎಂದುತಿಳಿಸುತ್ತಾನೆ.

"ನಡೆವುದೊಂದೆಭೂಮಿ ಕುಡಿಯುವುದೊಂದೇ ನೀರು
ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ
ನಡುವೆ ಎತ್ತಣದು ಸರ್ವಜ್ಞ"

ಈ ಭೂಲೋಕದ ಮೇಲೆ ಜನಿಸಿದ ಸಕಲ ಜೀವಿಗಳ ನೆಲೆ ಈ ಭೂಮಿ ಆಗಿರಲು, ಸಕಲ ಜೀವಿಗಳು ಸೇವಿಸಲು ಬಳಸುವ ಜಲವೊಂದೆ, ಸುಡುವ ಅಗ್ನಿಯು ಒಂದಾಗಿರಲು ಈ ಕುಲಗೋತ್ರ ಬೇರೆ ಹೇಗೆ ಎಂದು ಸರ್ವಜ್ಞನು ಈ ಸಮಾಜಕ್ಕೆ ಪ್ರಶ್ನಿಸುತ್ತಾನೆ. ಹುಟ್ಟಿದವರೆಲ್ಲರೂ ಒಂದೇ ಭೂಮಿಯ ಮೇಲೆ ಬದುಕು ನಡೆಸುತ್ತಿರಬೇಕಾದರೆ ಭೇದ ಎಲ್ಲಿಯದು ಎನ್ನುವುದೇ ಆತನ ವಾದ. ಎಲ್ಲರ ಹುಟ್ಟಿನ ಮೂಲವು ಒಂದೇ ಎನ್ನುವುದಕ್ಕೆ ಹೀಗೆ ಹೇಳುತ್ತಾನೆ.

"ಉತ್ತಮರೆಂಬುವರ ಹುಟ್ಟು ಪಾಲ್ಗಡಲೊಳಗೆ ?
ಉತ್ತಮರಧಮರೆನಬೇಡ
ಮೂತ್ರದ ಗೊತ್ತೆಯಿ ಬೀಜ ಸರ್ವಜ್ಞ "(ಅದೆ ಪು.೭೭)

ಇಲ್ಲಿ ಉತ್ತಮರ ಹುಟ್ಟು ಬೇರೆ ಅಧಮರ ಹುಟ್ಟು ಬೇರೆ ಇಲ್ಲ, ಎಲ್ಲರೂ ಜನಿಸುವ ಕ್ರಮವು ಒಂದಾಗಿರಲು ಮತ್ತೇಕೆ ಈ ಜಾತಿ-ಕುಲ ಭೇದ ಎನ್ನುವುದೇ ಈ ನೇರ ನುಡಿಯ ಸರ್ವಜ್ಞನ ಪ್ರಶ್ನೆಗೆ ಉತ್ತರ ಕೊಡುವವನೇ ಯಾರು ಇಲ್ಲ. ಆತನದು ಏನಿದ್ದರೂ ನೇರ ನುಡಿ, ಜೊತೆಗೆ ವೈಜ್ಞಾನಿಕ ಕಟ್ಟು ಸತ್ಯವೂ ಹೌದು ಎಲ್ಲರ ಜನನದ ಸ್ವರೂಪ ಬಿಚ್ಚಿಡತ್ತಾ ತನ್ನ ವಚನದಲ್ಲಿ ಹೀಗೆ ಸಾದರ ಪಡಿಸುತ್ತಾನೆ. "ಎಲು- ಕರುಳು-ನರ -ತೊವಲು!ತೊವಲು ಬಲಿದ ಚರ್ಮದ ಹೊದಿಕೆ

ಜಲ-ರಕ್ತ-ಮಾಂಸ-ಕ್ರಿಮಿಯಿರ್ಪ ದೇಹಕ್ಕೆ
ಕುಲವಾವುದಯ್ಯ ಸರ್ವಜ್ಞ (ಅದೇ.ಪು.೭೬)

ಮಾಂಸದ ಮುದ್ದೆಯೊಳಗೆ ಉತ್ಪತಿಯಾಗುವ ಈ ಪಿಂಡವು ಎಲುಬು, ಕರುಳು, ನರ , ತೊಗಲು, ಜಲ ರಕ್ತಗಳಾದಿ ಒಡಗೂಡಿ ಸೃಷ್ಟಿಯಾಗುವ ಈ ಹುಲು ಮಾನವ ಮುಂದೆ ತಾನು ಶ್ರೇಷ್ಠ ಆತ ಕನಿಷ್ಠ ಎಂದು ತಾರತಮ್ಯ ಮಾಡುವವರನ್ನು ನಿಮ್ಮ ಮೂಲ ನೆಲೆ ಏನು ಎಂಬುದು ಮನವರಿಕೆ ಮಾಡಿಕೊಡುತ್ತಾನೆ, ಹೀಗಾಗಿ ಇಲ್ಲಿ ಕುಲಗೋತ್ರ ದಲ್ಲಿ ಭೇದ ಮಾಡಲಿಕ್ಕೆ ಅವಕಾಶ ಇಲ್ಲವೇ ಇಲ್ಲವೆಂದು ಪ್ರತಿವಾದಿಸುತ್ತಾನೆ. ಮನದ ಮೈಲಿಗೆ ತೊಳೆಯದೇ ಈ ಶರೀರದ ಮೈಲಿಗೆ ತೊಳೆಯುತ್ತಾ ಸ್ವರ್ಗದ ಕಲ್ಪನೆ ನೀಡುವವರಿಗೆ ಸರ್ವಜ್ಞ ದೇಹ ಶುಚಿಗಿಂತಲೂ ಮನದ ಶುಚಿ ಮುಖ್ಯ ಎನ್ನುವುದಕ್ಕೆ ಹೀಗೆ ಹೇಳುತ್ತಾನೆ.

"ನಿತ್ಯ ನೀರೊಳು ಮುಳುಗಿ ಹತ್ಯಾನೆ ಸ್ವರ್ಗಕ್ಕೆ
ಹತ್ತೆಂಟು ಕಾಲ ಜಲದೊಳಗಿಹ ಕಪ್ಪೆ
ಹತ್ತವ್ಯಾಕಯ್ಯ ಸರ್ವಜ್ಞ"(ಅದೇ ಪು.೧೬೬)

ನಿತ್ಯ ನೀರಲ್ಲಿ ಸ್ನಾನ ಮಾಡಿದವರಿಗೆ ಶ್ರೇಷ್ಠ ಸ್ಥಾನಕ್ಕೆ (ಸ್ವರ್ಗಕ್ಕೆ) ಸಲ್ಲುತ್ತಾರೆ ಇನ್ನುಳಿದ ಜನರ ಸ್ವರ್ಗಕ್ಕೆ ಸಲ್ಲರು ಎನ್ನುವ ಮಾತ್ತಿಗೆ ಕಪ್ಪೆಯ ದೃಷ್ಟಾಂತ ನೀಡಿ ಅದನ್ನು ತಿಳಿಗೊಳಿಸುತ್ತಾನೆ. ಇಲ್ಲಿ ತನುವಿನ ಶುದ್ಧಿ ಗಿಂತಲೂ ಮನಃಶುದ್ಧಿ ಶ್ರೇಷ್ಠ ಎನ್ನುತ್ತಾನೆ. ಬರೀ ನಾವು ಹತ್ತು ಸಲ ಸ್ನಾನ ಮಾಡುವುದರಿಂದಲೇ ಸ್ವರ್ಗ ಪ್ರಾಪ್ತಿಯಾಗುತ್ತದೆ ಎಂದಾದರೆ ಕಪ್ಪೆ ಯಾಗಲೂ ನೀರಲ್ಲಿಯೇ ವಾಸಿ ಯಾಗಿರುತ್ತದೆ ,ಅದು ಸ್ವರ್ಗಕ್ಕೆ ಯಾಕೆ ಸಲ್ಲುವುದಿಲ್ಲ ಎನ್ನಲು ಇಲ್ಲಿ ತನುವಿನಕ್ಕಿಂತ ಮನಶುಚಿತ್ವಕ್ಕೆ ಆದ್ಯತೆ ನೀಡುತ್ತಾನೆ. ಜಾತಿಯೆಂಬ ಭ್ರಾಂತಿ ಅಳಿದವಂಗೆ ಯಾವ ಚಿಂತೆಗಳು ಕಾಡುವುದಿಲ್ಲ ಎಂದು ಜಾತಿಯೆಂಬ ಶಬ್ದದಿಂದ ಹೊರ ಬಂದು ನಿಶ್ಚಿಂತನಾಗಿರಬೇಕು ಎನ್ನುವ ಹಂಬಲ ಸರ್ವಜ್ಞನದು.

"ಜಾತಿಸೂತಕವಳಿದು ಭ್ರಾಂತಿಯ ಗುಣವಳಿದು
ಆತುಮನ ನೆಲೆಯ ನೆರೆಯರಿದು ನಿಂದವನಿ
ಗೇತರ ಚಿಂತೆ ಸರ್ವಜ್ಞ"(ಅದೇ ಪು. ೩೬)

ಮನುಜರಾದವರು ಜಾತಿ ಎಂಬ ಸೂತಕದಿಂದ ಹೊರಬಂದು ತನ್ನ ಆತ್ಮದ ನೆಲೆ ಯಾವುದು ಎಂಬುವುದನ್ನು ಅರಿತುಕೊಳ್ಳಬೇಕು. ನಮ್ಮೊಳಗಿರುವ ಆತ್ಮಕ್ಕೆ ಕುಲ-ಜಾತಿಯ ಲೇಪನವೇ ಇಲ್ಲ ; ಅದು ನಿರ್ವಿಕಾರ, ಯಾವುದೇ ಜಾತಿಗೆ ಅಂಟಿಕೊಂಡದು ಅಲ್ಲ ಎಂಬುದನ್ನರಿತರೆ

ತಾನು ನಿಶ್ಚಿಂತರಾಗಿರಬಹುದು. ಜಾತಿ ಎಂಬ ಜಾಡ್ಯದಲ್ಲಿ ಮುಳುಗಿದವರನ್ನು ಎಚ್ಚರಿಸಿಸುತ್ತಾನೆ. ದೇಹವು ಶಾಶ್ವತವಲ್ಲ ಕ್ಷಣಿಕ; ಆತ್ಮವೇ ಶ್ರೇಷ್ಠವಾಗಿರಲು ಅದು ಯಾವ ಜಾತಿ ಧರ್ಮಕ್ಕೂ ಅಂಟಿಕೊಳ್ಳದೆ ಸರ್ವಾಂತರ್ಯಾಮಿಯಾಗಿರುವಂತೆ ಜಾತಿ ಭ್ರಮೆಯಿಂದ ಹೊರಬಂದು ನಿಶ್ಚಿಂತವಾಗಿ ಬದುಕಲು ಉಪದೇಶಿಸಿದ್ದಾನೆ. ಈ ಸಮಾಜವು ಧರ್ಮದಲ್ಲಿ ಹೆಸರಿನಲ್ಲಿ ಕಟ್ಟಿಕೊಂಡ ಜಾತಿ ಮತಗಳ ಬಗ್ಗೆ ಸರ್ವಜ್ಞನಿಗೆ ಎಲ್ಲಿಲ್ಲದ ಕೋಪ ಅದನ್ನು ಸಾರಾಸಗಾಟವಾಗಿ ಅವುಗಳನ್ನು ತಳ್ಳಿ ಹಾಕುತ್ತಾನೆ ಜಾತಿ ಮತಗಳನ್ನು ನಿವಾರಿಸಲು ತಾನು ನಿಷ್ಠುರಿಯಾಗಿ ಇಡೀ ಸಮಾಜವನ್ನೇ ದೂಷಿಸುತ್ತಾನೆ.

"ಉತ್ತಮವಾದ ವರ್ಣಿಗಳ ಉತ್ತಮರು ಎನ್ನಬೇಡ
ಮತ್ತೆ ತನ್ನಂತೆ ಬಗ್ಗೆ ನೆಲ್ಲರನು
ಉತ್ತಮರು ಎನ್ನು ಸರ್ವಜ್ಞ "

ಉತ್ತಮ ಕುಲದಲ್ಲಿ ಹುಟ್ಟಿದವರು ಮಾತ್ರ ಉತ್ತಮ ರಲ್ಲ; ಹುಟ್ಟಿದ ಮಾತ್ರಕ್ಕೆ ಶ್ರೇಷ್ಠ ಆಗುವುದಿಲ್ಲ; ಅವರು ಕೈಗೊಳ್ಳುವ ತಾಳ್ಮೆಯಿಂದ ಶ್ರೇಷ್ಠರಾಗುತ್ತಾರೆ ಯಾರು ತನ್ನಂತೆ ಇತರರು ಬಗ್ಗೆಯೂಲಾರೋ ಅವರೇ ನಿಜವಾದ ಉತ್ತಮರು, ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವವರನ್ನು ಉತ್ತಮ ರಾಗುತ್ತಾರೆ, ಮನುಷ್ಯನು ತನ್ನ ಸ್ವಾರ್ಥಕ್ಕಾಗಿ ಏನೆಲ್ಲ ತ್ಯಾಗ ಮಾಡುತ್ತಾನೆ, ಅದನ್ನೆಲ್ಲಾ ಮರೆತು ಈ ಈ ಭೂಮಿ ದೂರದಲ್ಲಿರುವ ಚರಾಚರ ವಸ್ತುಗಳ ಬಗ್ಗೆ ಅನುಕಂಪವುಳ್ಳವನ್ನೆ ನಿಜವಾದ ಉತ್ತಮರು ಎಂದು ತಿಳಿಸುತ್ತಾನೆ. ಇಲ್ಲಿ ಯಾರು ಉತ್ತಮರು ಎನ್ನುವುದನ್ನು ವೈಚಾರಿಕ ನೆಲೆಗಟ್ಟಿ ನಾಲಗೆ ವ್ಯಾಖ್ಯಾನಿಸಿರನ್ನು ನೋಡಬಹುದು. ಸರ್ವಜ್ಞಾನ ದೃಷ್ಟಿಯಲ್ಲಿ ಹುಟ್ಟು ಮುಖ್ಯವಲ್ಲ ಆತನ ವ್ಯಕ್ತಿತ್ವ ಮುಖ್ಯ; ಹುಟ್ಟು ಸಹಜ ಆದರೆ ವ್ಯಕ್ತಿತ್ವ ರೂಪಿಸುವುದು ಯಾವುದೇ ಒಂದು ಜಾತಿಯಲ್ಲಿ; ಇಡೀ ಸಮಾಜ ಎನ್ನುವುದನ್ನು ಮರೆಯಬಾರದು ಎನ್ನುತ್ತಾನೆ, ಈತನು ಬೋಧಿಸುವ ಮಾರ್ಗ ಒಂದು ಸೀಮಿತವಾದ ವರ್ಗವಲ್ಲ. ಇಡೀ ಸಮಾಜ ಅದು ಮನುಷ್ಯನ ಸರ್ವಾಂಗಿಣ ಅಭಿವೃದ್ಧಿಯ ದೂರದೃಷ್ಟಿ ಅರಿತವರಿಗೆ ಯಾವುದೇ ಕುಲ-ಗೋತ್ರವಿಲ್ಲ. ಅರಿಯುದವನಿಗೆ ಮಾತ್ರ ಈ ಕುಲ-ಗೋತ್ರಗಳಲ್ಲ ಎನ್ನುವುದು ಅವನ ವಾದ ಸರ್ವಜ್ಞನು ಇಡೀ ತನ್ನ ಕಾಲಿನ ಸಮಾಜವನ್ನೇ ವಿಮರ್ಶೆಗೆ ಒಳಗು ಮಾಡಿ; ಅದರ ಓರೆ-ಕೋರೆಗಳನ್ನು ತಿದ್ದುವ ಹಾಗೆ ರಚಿಸಿದ್ದಾನೆ.

"ಕುಲವಿಲ್ಲ ಯೋಗಿಗೆ ಛಲವಿಲ್ಲ ಬಲ್ಲಂಗೆ
ತೊಲೆಕಂಬವಿಲ್ಲ ಗಗನಕ್ಕೆ ಸ್ವರ್ಗದಿ
ಹೊಲಗೇರಿಯಿಲ್ಲ ಸರ್ವಜ್ಞ"(ಅದೇ ಪು.೧೪೦)

ಈ ಸಮಾಜದಿಂದ ಜಾತಿ ಪದ್ಧತಿ ನಿರ್ಮೂಲನೆ ಮಾಡುವ ಅದನ್ನು ಬೇರು ಸಮೇತ ಕಿತ್ತೆಸೆಯುವ ಇಂಗಿತವನ್ನು ವ್ಯಕ್ತಪಡಿಸಿದ್ದಾನೆ. ಸ್ವರ್ಗ-ನರಕ ಈ ಹುಲು ಮಾನವ ನಿರ್ಮಿಸಿಕೊಂಡ ಲೋಕ. ಸ್ವರ್ಗದಲ್ಲಿ ಹೊಲಗೇರಿಗಳಿಲ್ಲ ಈ ಭೂಲೋಕದಲ್ಲಿ ಈ ತಿಳಿಯದ ಮಾನವ ನಿರ್ಮಿಸಿಕೊಂಡ ಲೋಕವೆಂದು; ಬಲ್ಲವನಿಗೆ ಎಲ್ಲರೂ ಸಮಾನರು ಇಲ್ಲಿ ಮೇಲು-ಕೀಳು ಎಂಬ ಭಾವನೆಯೇ ಇರುವುದು ಅಜ್ಞಾನಿಯಲ್ಲಿ ಮಾತ್ರ ಎನ್ನುತ್ತಾನೆ, ಹೇಗೆ ಆಗಸಕ್ಕೆ ಆಧಾರ ತೊಲೆ ಕಂಬಗಳಿಲ್ಲವೊ ಹಾಗೆಯೇ ಸ್ವರ್ಗದಲ್ಲಿ ಈ ಜಾತಿಯ ತರತಮಗಳಿಲ್ಲ ಎಂದು; ಮನುಷ್ಯನೇ ತನ್ನ ಸ್ವಾರ್ಥಕ್ಕಾಗಿ ಈತನೇ ಸೃಷ್ಟಿಸಿಕೊಂಡ ಜಾತಿ ವರ್ಗ-ಭೇದಗಳು ಎಂದು ಸರ್ವಜ್ಞನು ಈ ಸಮಾಜವನ್ನು ಟೀಕಿಸುತ್ತಾನೆ. . ಎಲ್ಲ ಜಾತಿಗಳು ಇಲ್ಲಿಯೇ ನಿರ್ಮಾಣ ಮಾಡಿಕೊಂಡುವುಗಳಾಗಿವೆ ಸ್ವರ್ಗದಲ್ಲಿ ಹೊಲಗೇರಿಯಾಗಲಿ, ಮಾದಿಗ ರಾಗಲಿ ಇಲ್ಲ ಎನ್ನುವುದಕ್ಕೆ ತನ್ನ ವಚನದಲ್ಲಿ ಸರ್ವಜ್ಞನು ಹೀಗೆ ಚಿತ್ರಿಸಿದ್ದಾನೆ.

"ಆದಿಯಲಿ ಜಿನನಿಲ್ಲ ವೇದದಲಿ ಹುಸಿಯಿಲ್ಲ
ವಾದದಿಂದಾದ ಹಣವಿಲ್ಲ-ಸ್ವರ್ಗದಲ್ಲಿ
ಮಾದಿಗರಿಲ್ಲ ಸರ್ವಜ್ಞ"(ಅದೇ ಪು.೮೫)

'ಜಾತಿ'ಯೆಂಬ ವಿಷ ಬೀಜ ಬಿತ್ತಿದ ಈ ಮನುಷ್ಯ ಸೃಷ್ಟಿಕರ್ತನು ಸೃಷ್ಟಿ ಮಾಡುವಾಗಲೇ ಜಾತಿಯ ಹಣೆಪಟ್ಟಿ ಕಟ್ಟಿ ಈ ಭೂಲೋಕಕ್ಕೆ ಇಳಿಸುವುದಿಲ್ಲ. ತನ್ನ ಒಡೆತನದ ಸ್ಥಾಪನೆಗಾಗಿ ಈ ಮಾನವ ಮನುಷ್ಯ-ಮನುಷ್ಯರಲ್ಲಿಯೇ ಭೇದ ಸೃಷ್ಟಿಸಿ, ಹೊಲೆಯ , ಮಾದಿಗ, ಕುರುಬ,

ಕಬ್ಬಲಿಗ, ತಾಂಬೂಲಿಗ, ಎಂಬ ವೃತ್ತಿ ಆಧಾರಿತ ಕುಲ ಕಸಬುಗಳನ್ನೇ ಜಾತಿ ಸೂಚಕ ಮಾಡಿ; ವೃತ್ತಿ ಮಾಡುವವನು ಕೆಳವರ್ಗದವರು ಎನ್ನುವ ಹಣೆಪಟ್ಟಿ ಕಟ್ಟಿ ಜಾತಿ ಅದಕ್ಕೊಂದು ಸ್ಥಾಪಿಸಿ; ಈ ಜಾತಿ ಸೂಚಕ ಹೊಲಗೇರಿ ಮಾದಿಗಕೇರಿ ಕುರುಬಕೇರಿ ಕಬ್ಬಲಿಗೇರಿ ಎಂಬ ಭೇದಗಳು ಊರಲ್ಲಿ ಸೃಷ್ಟಿಸಿದರು. ಆದರೆ ಮೂಲತಃ ಇವ್ಯಾವುವೂ ಸ್ವರ್ಗದಲ್ಲಿಯೂ ಹೊಲಗೇರಿ ಮಾದಿಗರು ಇಲ್ಲವೇ ಇಲ್ಲ ವೆಂದು ಸರ್ವಜ್ಞನು ತನಗೆ ಅನಿಸಿದ್ದನ್ನು ಅಂಜದೇ ಅಳುಕದೇ ಹೇಳುವ ಆತನ ಎದೆಗಾರಿಕೆ ಮೆಚ್ಚತಕ್ಕದ್ದು.

"ಕೂಳಿಂದ ಕುಲಬೆಳೆದು ಬಾಳಿಂದ ಬಲಬೆಳೆದು
ಕೂಳು ನೀರುಗಳು ನೀಗಿದರೆ ಕುಲಗಳನು
ಕೇಳಬೇಡೆಂದ ಸರ್ವಜ್ಞ"

ನೀರು ಬೆರೆಸಿ ಮಾಡುವ ಅನ್ನಕ್ಕೆ ಮಾತ್ರ ಕುಲ ಬಲ ಇದೆ ಆದರೆ ಅದನು ಯಾರೇ ಧವಸ ಧಾನ್ಯಗಳು ಬೆಳಸಲಿ ಅದಕ್ಕೆ ಯಾವುದೇ ಕುಲ ಬಲ ಇಲ್ಲ. ಅದರಲ್ಲಿ ನೀರು ಮಿಶ್ರಣ ಆದ ತಕ್ಷಣ ಅದಕ್ಕೆ ಜಾತಿ ಎಂಬ ರೋಗ ಅಂಟಿಕೊಳ್ಳುತ್ತದೆ ನೀರು ಬೆರೆಸದ ಯಾವೂದೇ ವಸ್ತುವಿಗೆ ಜಾತಿ ಸೂತಕ ಅಂಟಿಕೊಳ್ಳುವುದಿಲ್ಲ . ಹಣಕ್ಕೆ ಕುಲ/ಜಾತಿ ಇಲ್ಲ ಇದು ಸರ್ವಾಂತರ್ಯಾಮಿ ಅದಕ್ಕಾಗಿ ಈ ಅನ್ನ ಮತ್ತು ನೀರು ಇಲ್ಲದಿದ್ದರೆ ಈ ಕುಲ/ಜಾತಿಗಳೇ ಇರುವುದಿಲ್ಲ ಎಂದು ಸರ್ವಜ್ಞ ಬಹು ಕಠೋರವಾಗಿ ನುಡಿದಿದ್ದಾನೆ.

"ಅವಯವಗಳೆಲ್ಲರಿಗೆ ಸಮನಾಗಿ ಇರುತಿರಲು
ಭವಿ, ಭಕ್ತ ಶ್ವಪಚ,ಶೂದ್ರರಿವರಿಂತೆಂಬ
ಕವನವೆತ್ತಣದು? ಸರ್ವಜ್ಞ"

ಮನುಷ್ಯನಾದವನಿಗೆ ಎಲ್ಲ ಅವಯವಗಳು ಆ ಸೃಷ್ಟಿಕರ್ತ ಎಲ್ಲರಿಗೂ ಸಮನಾಗಿಯೇ ನೀಡಿದ್ದಾನೆ ಇದರಲ್ಲಿ ಯಾವುದೇ ತರತಮಗಳಿಲ್ಲ. ಹೀಗಾಗಿರಲೂ ಮತ್ತೇಕೆ ಭವಿ,ಭಕ್ತ ಮತ್ತು ಶೂದ್ರರೆಂಬ ಭೇದ ಎಂದು ಸರ್ವಜ್ಞ ಸಮಾಜಕ್ಕೆ ಪ್ರಶ್ನೆ ಮಾಡುತ್ತಾನೆ.

ಹೀಗೆ ಎಷ್ಟೇ ಶತಮಾನಗಳು ಉರುಳಿದರೂ ಈ ಜಾತಿ ಎಂಬ ಮಹಾರೋಗ ಮಾತ್ರ ಪೆಡಂಭೂತದಂತೆ ಇಂದಿಗೂ ಕಾಡುತ್ತಿದೆ.ಅದೇಷ್ಟೋ ಮಹಾಮಾರಿ ರೋಗಗಳಿಗೆ ಔಷಧಿಯನ್ನು ಕಂಡು ಹಿಡಿದು ಮಹಾಮಾರಿ ರೋಗವನ್ನು ಓಡಿಸಲಾಗಿದೆ ಆದರೆ ಈ ಜಾತಿ ಎಂಬ ಮಹಾ ಸಾಂಕ್ರಾಮಿಕ ಅಂಟು ರೋಗವನ್ನು ಮಾತ್ರ ಓಡಿಸಲು ಆಗುತ್ತಾ ಇಲ್ಲ ಅದೇಷ್ಟೋ ದಾರ್ಶನಿಕರೂ ಸಾಮಾಜಿಕ ಚಿಂತಕರೂ ಶ್ರಮಿಸಿದರೂ ಈ ರೋಗ ನಮ್ಮನ್ನೂ ಬಿಟ್ಟು ಬಿಡದೇ ಬೇತಾಳನಂತೆ ಅಂಟಿಕೊಂಡಿದೆ ಎಂದೇ ಹೇಳಬಹುದು.

ಗ್ರಂಥ ಋಣ

1. ಡಾ.ಎಲ್.ಬಸವರಾಜು (ಸಂ) ಸರ್ವಜ್ಞನ ವಚನಗಳು;ಗೀತಾ ಬುಕ್ ಹೌಸ್ ಮೈಸೂರು, 2008.
2. ಡಾ.ಕಾಳೇಗೌಡ ನಾಗವಾರ; ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ,ಸಂ.7,ಬೆಂಗಳೂರು ,ವಿಶ್ವವಿದ್ಯಾಲಯ, 2008.
3. ಡಾ.ಬಸವರಾಜ ಪೋಲಿಸ್ ಪಾಟೀಲ,(ಸಂ)ಸರ್ವಜ್ಞನ ವಚನಗಳ ಸಂಗ್ರಹ, ಗುಲಬರ್ಗಾ,ವಿಶ್ವವಿದ್ಯಾಲಯ,ಗುಲಬರ್ಗಾ, 2012.